# ಶ್ರೀ.ಪ್ರಭಾಕರ್. ಎಸ್. ವಿ., ಗೆ "ಶ್ರೇಷ್ಠ ಶಿಕ್ಷಕೇತರ" ಪ್ರಶಸ್ತಿ

ಶ್ರೀ.ಪ್ರಭಾಕರ್.ಎಸ್.ವಿ., ಹಿರಿಯ ದೂರವಾಣಿ ನಿರ್ವಾಹಕರು ರವರಿಗೆ ಬೀದರ್‌ನ ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ "ಶ್ರೇಷ್ಠ ಶಿಕ್ಷಕೇತರ" ಪ್ರಶಸ್ತಿಯನ್ನು ವಿಶ್ವವಿದ್ಯಾಲಯದ 19ನೇ ಸಂಸ್ಥಾಪನಾ ದಿನ ದಿನಾಂಕ 17.01.2024 ರಂದು ನೀಡಿ ಗೌರವಿಸಿದೆ.

ಕೃಷಿ ವಿಶ್ವವಿದ್ಯಾಲಯದಲ್ಲಿ 2000ರಲ್ಲಿ ಸೇವೆ ಸೇರಿ ನಂತರ ಪಶುವೈದ್ಯಕೀಯ ವಿಶ್ವವಿದ್ಯಾಲಯವು 2005 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು ಅಂದಿನಿಂದ ಬೆಂಗಳೂರಿನ ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು ಶ್ರೀ.ಪ್ರಭಾಕರ್.ಎಸ್.ವಿ ಇವರು ಒಟ್ಟು 24 ವರ್ಷಗಳ ಸುಧೀರ್ಘ ಸೇವೆಯನ್ನು ಸಲ್ಲಿಸಿರುತ್ತಾರೆ.

**'ಕನ್ನಡ ರಾಜ್ಯೋತ್ಸವ – 2022' ಪ್ರಶಸ್ತಿಯನ್ನು** ಕನ್ನಡ ಸಂಘ, ಪಶುವೈದ್ಯಕೀಯ ಮಹಾವಿದ್ಯಲಯ, ಹೆಬ್ಬಾಳ, ಬೆಂಗಳೂರು ಇವರು ಅವರ ವೃತ್ತಿ ಜೀವನದಲ್ಲಿ ಮತ್ತು ಕನ್ನಡ ಭಾಷೆ, ನೆಲ, ಜಲ ಬೆಳಸಲು ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.



**ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರಿನ ಶ್ರೀ.ಪ್ರಭಾಕರ್.ಎಸ್.ವಿ, ಹಿರಿಯ ದೂರವಾಣಿ ನಿರ್ವಾಹಕರು ಮತ್ತು ಡೀನ್ ರವರ ಆಪ್ತ ಕಾರ್ಯದರ್ಶಿ (ಪ್ರಭಾರ) ಇವರಿಗೆ ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್‌ನ ವತಿಯಿಂದ "ಶ್ರೇಷ್ಠ ಶಿಕ್ಷಕೇತರ" ಪ್ರಶಸ್ತಿ ನೀಡಿ ಗೌರವಿಸಲಾಯಿತು.**

ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಇದೇ ಮೊದಲ ಭಾರಿಗೆ "ಶ್ರೇಷ್ಠ ಶಿಕ್ಷಕೇತರ" ಪ್ರಶಸ್ತಿಯನ್ನು ನೀಡಬೇಕೆಂಬ ನಿರ್ಧಾರವನ್ನು ಮಾಡಿದ್ದು, ಮೊಟ್ಟ ಮೊದಲ "ಶ್ರೇಷ್ಠ ಶಿಕ್ಷಕೇತರ" ಪ್ರಶಸ್ತಿಯನ್ನು ಶ್ರೀ.ಪ್ರಭಾಕರ್.ಎಸ್.ವಿ ರವರು ಪಡೆದಿದ್ದಾರೆ ಎಂಬ ಹೆಗ್ಗಳೆ ಇವರದು.

ಶ್ರೀ.ಪ್ರಭಾಕರ್.ಎಸ್.ವಿ., ರವರು ಬಹಳ ಸರಳ, ಸಜ್ಜನ ವ್ಯಕ್ತಿತ್ವ ಹೊಂದಿದು, ವಿಶ್ವವಿದ್ಯಾಲಯದ ಎಲ್ಲಾ ಮೇಲಾಧಿಕಾರಿಗಳು ನೀಡುವ ಕೆಲಸವನ್ನು ಅಚ್ಚುಕಟ್ಟಾಗಿ ನಿಭಾಯಿಸುವುದು ಇವರ ಗುಣ, ಆದ್ದರಿಂದ ಇವರು ಎಲ್ಲಾ ಅಧಿಕಾರಿಗಳು, ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿಗಳಿಗೆ ಅಚ್ಚುಮೆಚ್ಚಿನ ವ್ಯಕ್ತಿ.